2) ಸಾರ್ವಜನಿಕ ಶಿಕ್ಷಣ ಇಲಾಖೆಯ ಆನಧಿಕೃತ ಶಾಲಾ-ಕಾಲೇಜುಗಳಲ್ಲಿ ತಮ್ಮ ಮಕ್ಕಳನ್ನು ಸೇರಿಸಬಾರದೆಂದು ಪೋಷಕರಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಎಲ್ಲಾ ಪ್ರಮುಖ ದಿನ ಪತ್ರಿಕೆಗಳ ಮೂಲಕ ಪ್ರಕಟಣೆ ನೀಡುತ್ತಿದೆ. ಆನಧಿಕೃತ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಸಮಸ್ಯೆ ಬಗ್ಗೆ ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಿದ್ದು ಸಮಿತಿಯು ದಿನಾಂಕ 17-6-1991ರಂದು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯು ಸರ್ಕಾರದ ಪರೀಶೀಲನೆಯಲ್ಲಿದೆ.

ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವುದು

478 (789). ಡಾ: ಆರ್.ಬಿ. ಚೌಧರಿ (ಸಿಂಧಗಿ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸರ್ಕಾರಿ ಉರ್ದು ಪ್ರಾರ್ಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವ ಅವಕಾಶಗಳಿದ್ದು, ಈ ಸೌಲಭ್ಯ ಖಾಸಗಿ ಶಾಲೆಗಳಿಗೆ ವಿಸ್ತರಿಸಿಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಏಕೆ?

ಶ್ರೀ ಎಂ. ವೀರಪ್ಪ ಮೊಯಲಿ (ಶಿಕ್ಷಣ ಸಚಿವರು):-

ಅ) ಹೌದು.

ಆ) ಪ್ರಾಥಮಿಕ ಶಾಲೆಗಳಲ್ಲಿ ಭಾಷಾ ಶಿಕ್ಷಕರ ಪ್ರತ್ಯೇಕ ನೇಮಕಾತಿಗೆ ಅವಕಾಶವಿಲ್ಲ. ಶಾಲೆಗೆ ಮಂಜೂರಾದ ಶಿಕ್ಷಕರ ಹುದ್ದೆಯಲ್ಲಿ ಒಂದು ಹುದ್ದೆಯನ್ನು ಕನ್ನಡ ಭಾಷಾ ಜ್ಞಾನ ಬಲ್ಲವರಿಂದ ತುಂಬುವಂತೆ ಆದೇಶಿಸಲಾಗಿದೆ.

ಕುಂದಾಪುರ ಕ್ಷೇತ್ರದ ವ್ಯಾಪ್ತಿಯ ಪ್ರೌಢಶಾಲೆಗಳ ಕುರಿತು

479 (794). ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕುಂದಾಪುರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರೌಢಶಾಲೆಗಳೆಷ್ಟು? (ಶಾಲಾವಾರು ವಿವರ ನೀಡುವುದು)

ಆ) ಈ ಪ್ರೌಢಶಾಲೆಗಳಿಗೆ ಮಂಜೂರಾದ ಅಧ್ಯಾಪಕರೆಷ್ಟು? (ಶಾಲಾವಾರು ವಿವರ ನೀಡುವುದು)

ಇ) ವಿದ್ಯಾರ್ಥಿಗಳ ನಿಷ್ಪತ್ತಿಗನುಸಾರವಾಗಿ ಕೊರತೆ ಇರುವ ಅಧ್ಯಾಪಕರೆಷ್ಟು?

ಈ) ಕೊರತೆಯನ್ನು ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಲಿ (ಶಿಕ್ಷಣ ಸಚಿವರು):-

ಅ) 23. (ಅನುಬಂಧ ಆನಲ್ಲಿ ಕೊಡಲಾಗಿದೆ)

ಆ) 217. (ಅನುಬಂಧ ಬಿ ನಲ್ಲಿ ಕೊಡಲಾಗಿದೆ)

ಇ) 26.

ಈ) ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಸಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಸರ್ಕಾರಿ ಸಂಯುಕ್ತ ಕಿರಿಯ ಕಾಲೇಜಿನ ಪ್ರೌಢಶಾಲಾ ವಿಭಾಗ

ಅನುಬಂಧ - ಅ

1) ಸರ್ಕಾರಿ ಕಿರಿಯ ಕಾಲೇಜು, ಕುಂದಾಪುರ
2) ಸರ್ಕಾರಿ ಕಿರಿಯ ಕಾಲೇಜು, ಬೈಂದೂರು
3) ಸರ್ಕಾರಿ ಕಿರಿಯ ಕಾಲೇಜು, ಶಂಕರನಾರಾಯಣ
4) ಸರ್ಕಾರಿ ಕಿರಿಯ ಕಾಲೇಜು, ನಾವುಂದ